[ Govt. of Karnataka C.R.P. 67]

| Deposition Sheets (RP.No.57) Form No.4 (Civil) |
|---|

IN THE COURT OF CIVIL JUDGE & J.M.F.C., KARKALA.

Criminal Case No. 247-22

ಪಿ.ಡಬ್ಲ್ಯು : 1 ಸಿ.ಡಬ್ಲ್ಯು : 1

ಸಾಕ್ಷಿದಾರನ ಹೆಸರು : ತೇಜಸ್ವಿ ಟಿ ಐ

ತಂದೆಯ ಹೆಸರು : ಇಂದ್ರೇಶ್

ಪ್ರಾಯ : 36 ವರ್ಷ

ಉದ್ಯೋಗ : ಪೊಲೀಸ್ ಉಪನೀರಿಕ್ಷಕರು ಕಾಪು ಠಾಣೆ

ವಾಸ : ಕಾಪು

ದಿನಾಂಕ 07.03.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

ನಾನು ಜನವರಿ 2021 ರಿಂದ ಜುಲೈ 2023 ರವರೆಗೆ ಕಾರ್ಕಳ ಗ್ರಾಮಾಂತರ ಠಾಣೆಯಲ್ಲಿ ಆರಕ್ಷಕ ಉಪ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿಃ 03.02.2021 ರಂದು 8.00 ಗಂಟೆಗೆ ನಾನು ಠಾಣೆಯಲ್ಲಿರುವಾಗ ಬಂದ ಬಾತ್ಮಿ ಏನೆಂದರೆ ಕಾರ್ಕಳ ತಾಲೂಕು ದುರ್ಗಾ ಗ್ರಾಮದ ತೆಳ್ಳಾರು ಒಂದುಮನೆಯಲ್ಲಿ ದನದ ಮಾಂಸ ಮಾರಾಟ ಮಾಡುತ್ತಿದ್ದಾಗಿ ಬಂದ ಬಾತ್ಮಿಯ ಮೇರೆಗೆ ಠಾಣೆಯಲ್ಲಿ ಹಾಜರಿದ್ದ ಸಿಬ್ಬಂದಿಗಳಾದ ಚಾಸಾ-4 ರಿಂದ 8 ರವರಿಗೆ ಬಾತ್ಮೀಯ ವಿಷಯ ತಿಳಿಸಿದ ಇಲಾಖಾ ಜೀಪಿನಲ್ಲಿ 8.30 ಗಂಟೆಗೆ ಠಾಣೆಯಿಂದ ಹೊರಟು ತೆಳ್ಳಾರು ಗ್ರಾಮ ತಲುಪಿದ್ದು ಅಲ್ಲಿ ಮಾಹಿತಿ ನೀಡಿದ ಬಾತ್ಮಿದಾರರು ಹಾಜರಿದ್ದು ಅಲ್ಲಿ ಆಸಿಯಾ ಮಂಜಿಲ್ ಎಂಬ ಮನೆಯನ್ನು ತೋರಿಸಿ ಬಾತ್ಮಿಯ ವಿಚಾರ ತಿಳಿಸಿ ಹೋಗಿರುತ್ತಾರೆ. ನಂತರ ಸ್ಥಳಕ್ಕೆ ಪಂಚರಾದ ಚಾಸಾ-2 ಮತ್ತು 3 ರವರನ್ನು ಬರಮಾಡಿಕೊಂಡು ಅವರಿಗೆ ಪಂಚರಾಗಿ ಸಹಕರಿಸುವಂತೆ ನೋಟಿಸು ನೀಡಿ ಅವರನ್ನು ಕರೆದುಕೊಂಡು ಸಿಬ್ಬಂದಿಗಳೊಂದಿಗೆ ಸದ್ರಿ

ಮನೆಯ ಹತ್ತಿರ ಹೋಗುತ್ತಿರುವಾಗ ಮನೆಯ ಹಿಂಬದಿಯ ಬಾಗಿಲಿನಿಂದ ಸಮವಸ್ತ್ರದಲ್ಲಿದ್ದ ನಮ್ಮನ್ನು ನೋಡಿ ಇಬ್ಬರು ವ್ಯಕ್ತಿಗಳು ಓಡಿ ಹೋಗಿರುತ್ತಾರೆ. ನಂತರ ಸದ್ರಿ ಮನೆಯಲ್ಲಿದ್ದ ಓರ್ವ ಹೆಂಗಸನ್ನು ವಿಚಾರಿಸಲಾಗಿ ತಾನು ಆಸಿಯಾ ಎಂಬುದಾಗಿ ತಿಳಿಸಿದ್ದು ಬಾತ್ಮೀಯ ವಿಚಾರಣೆ ಮಾಡಲಾಗಿ ಅವರು ತನ್ನ ಗಂಡ ಸಯ್ಯದ್ ಜಲೀಲ್ ಸಾಹೇಬ್ ನ್ ಮತ್ತು ತನ್ನ ಮಗ ಅಫ್ರೀದ್ ರವರು ಸ್ವಂತ ಲಾಭಕ್ಕಾಗಿ ಎಲ್ಲಿಂದಲೋ ದನವನ್ನು ಕಡಿದು ಮಾಂಸವನ್ನಾಗಿ ಮಾಡಿ ಪ್ಲಾಸ್ಟಿಕ್ ಪ್ಯಾಕೆಟ್ ಗಳಲ್ಲಿ ಮನೆಯ ಹಿಂಬದಿಯ ಬಕೆಟ್ ನಲ್ಲಿ ಇಟ್ಟಿರುವುದಾಗಿ ನುಡಿದಿದ್ದು ಅದನ್ನು ತೋರಿಸುವುದಗಿ ಹೇಳಿ ನಮಗೆ ತೋರಿಸಿಕೊಟ್ಟ ಮೇರೆಗೆ ಸದ್ರಿ 2 ಬಕೆಟ್ ಗಳಲ್ಲಿ ದನದ ಮಾಂಸ ಇರುವುದಾಗಿ ಕಂಡು ಬಂದಿದ್ದು ತಕ್ಷಣ ನಾನು ವರದಿ ತಯಾರಿಸಿ ಪ್ರಕರಣ ದಾಖಲಿಸುವ ನಿಮಿತ್ತ ಚಾಸಾ-7 ರವರನ್ನು ಠಾಣೆಗೆ ಕಳುಹಿಸಿ ಪ್ರಕರಣ ದಾಖಲಿಸಿ ಕಡತವನ್ನು ತಂದು ತನಿಖೆ ಸಲುವಾಗಿ ನೀಡುವಂತೆ ಸೂಚಿಸಿ ಕಳುಹಿಸಿರುತ್ತೇನೆ. ಆಗ ಸಮಯ 9.00 ಗಂಟೆ ಆಗಿರುತ್ತದೆ. ಬೆಳಿಗ್ಗೆ 10.30 ಗಂಟೆಗೆ ಚಾಸಾ-7 ರವರು ಪ್ರಕರಣ ದಾಖಲಿಸಿ ಕಡತವನ್ನು ತಂದು ನೀಡಿದ್ದು ನಂತರ ಪ್ರಕರಣದಲ್ಲಿ ಮುಂದಿನ ತನಿಖೆ ಕಾಲಕ್ಕೆ ನಮ್ಮೊಂದಿಗೆ ಹಾಜರಿರುವಂತೆ ಚಾಸಾ-17 ರವರಿಗೆ ಫೋನ್ ಮೂಲಕ ಕರೆ ಮಾಡಿ ತಿಳಿಸಿದ್ದು ಸದ್ರಿಯವರು ತುರ್ತು ಸಭೆಯ ನಿಮಿತ್ತ ಕರ್ತವ್ಯದಲ್ಲಿರುವುದರಿಂದ ತಡವಾಗುವುದಾಗಿ ತಿಳಿಸಿರುತ್ತಾರೆ. ನಂತರ ಈ ಬಗ್ಗೆ ಅವರಿಗೆ ಮನವಿ ಪತ್ರ ಸಲ್ಲಿಸಿರುತ್ತೇನೆ. ಮಧ್ಯಾಹ್ನ 3.00 ಗಂಟೆಗೆ ಚಾಸಾ-17 ರವರು ಸ್ಥಳಕ್ಕೆ ಬಂದಿದ್ದು ಅವರು ಮತ್ತು ಪಂಚರ ಸಮಕ್ಷಮ ಶ್ರೀಮತಿ ಆಸಿಯಾರವರು ತೋರಿಸಿಕೊಟ್ಟ ಬಕೆಟ್ ನಲ್ಲಿರುವ ದನದ ಮಾಂಸವನ್ನು ಪರಿಶೀಲಿಸಲಾಗಿ ಸದ್ರಿ ಸ್ಥಳದಲ್ಲಿ 2 ಬಕೆಟ್ ಗಳು ಇದ್ದವು. ಪ್ರತಿ ಬಕೆಟ್ ನಲ್ಲಿ ತಲಾ 6 ರಂತೆ ಮಾಂಸದ ಪ್ಯಾಕೆಟ್ ಗಳು ಇದ್ದವು. ಸದ್ರಿ ಮಾಂಸವನ್ನು ತೂಕ ಮಾಡಲು ಚಾಸಾ-5 ರವರಿಗೆ ತಕಡಿಯನ್ನು ತರಲು ತಿಳಿಸಿದ್ದು ಸದ್ರಿ ಮಾಂಸವನ್ನು ತೂಕ ಮಾಡಿ ನೋಡಲಾಗಿ 20 ಕೆ ಜಿ ತೂಕ ಇರುತ್ತದೆ. ಚಾಸಾ-17 ರವರು ಪ್ರತಿ 12 ಪ್ಯಾಕೆಟ್ ನಲ್ಲಿ ತಲಾ ಒಂದರಂತೆ ಮಾಂಸದ ತುಂಡು ತೆಗೆದು ರಸಾಯನಿಕ ಪರೀಕ್ಷೆಗಾಗಿ ಒಂದು ಪ್ಲಾಸ್ಟಿಕ್ ಡಬ್ಬದಲ್ಲಿ ಹಾಕಿ ಪಂಚರ ಸಮಕ್ಷಮ ನೀಡಿದ್ದನ್ನು ರಸಾಯನಿಕ ಪರೀಕ್ಷೆಯ ಸಲುವಾಗಿ ಪಂಚರ ಸಮಕ್ಷಮ ವಶಪಡಿಸಿಕೊಂಡು ಅದನ್ನು ಬಿಳಿ ಬಟ್ಟೆಯಲ್ಲಿ ಪ್ಯಾಕ್ ಮಾಡಿ ಅದರ ಮೇಲೆ ಪಂಚರು ಮತ್ತು ನನ್ನ ಸಹಿವುಳ್ಳ ಚೀಟಿಯನ್ನು ಅಂಟಿಸಿರುತ್ತೇನೆ. ಅದನ್ನು ಎ ಎಂದು

ಗುರುತು ನೀಡಲಾಯಿತು. ನಂತರ ಉಳಿದ ಮಾಂಸವನ್ನು ಸದ್ರಿ ಸ್ಥಳದಲ್ಲಿ ಚಾಸಾ-4 ರವರು ಮಾನ್ಯ ನ್ಯಾಯಾಲಯದ ಆದೇಶದ ನಿಮಿತ್ತ ವಿಲೆವಾರಿ ಮಾಡಲು ನೀಡಿರುತ್ತೇನೆ. ಸದ್ರಿ ಸ್ಥಳದಲ್ಲಿ ಅರೋಪಿಗಳು ಕೃತ್ಯಕ್ಕೆ ಬಳಸಿದ ಒಂದು ಮಾಂಸವನ್ನು ತುಂಡು ಮಾಡಲು ಬಳಸುವ ಮರದ ತುಂಡು, ಮರದ ಹಿಡಿಕೆವುಳ್ಳ ಕತ್ತಿ, ಒಂದು ನೈಲಾನ್ ಕೈ ಚೀಲವನ್ನು ಶ್ರೀಮತಿ ಆಸಿಯಾರವರು ಹಾಜರುಪಡಿಸಿದ್ದು ಅವುಗಳನ್ನು ತನಿಖೆ ಬಗ್ಗೆ ವಶಪಡಿಸಿಕೊಳ್ಳಲಾಯಿತು. ಷದ್ರಿ ಪಂಚನಾಮೆಯನ್ನು 3.00 ರಿಂದ 4.30 ರ ತನಕ ಜರುಗಿಸಿದ್ದು ಪಂಚನಾಮೆ ಕಾಲಕ್ಕೆ ಭಾವಚಿತ್ರವನ್ನು ತೆಗೆಯಲಾಯಿತು. ವಶಪಡಿಸಿಕೊಂಡ ಎಲ್ಲಾ ಮಾಲುಗಳನ್ನು ಪಂಚನಾಮೆಯನ್ನು ಠಾಣೆಗೆ ಬಂದು ಕಡತಕ್ಕೆ ಅಳವಡಿಸಿಕೊಂಡು ಹಾಗೂ ಮಾಂಸವನ್ನು ವಿಲೇವಾರಿ ಮಾಡಿದ ವರದಿಯನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ಮುಂದಿನ ತನಿಖೆ ಬಗ್ಗೆ ಕಡತವನ್ನು ಚಾಸಾ-18 ರವರಿಗೆ ನೀಡಿರುತ್ತೇನೆ.

ಸಾಕ್ಷಿಯು ತಾನು ನೀಡಿದ ಪಿರ್ಯಾದಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದ್ರಿ ಪಿರ್ಯಾದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ತಕ್ಷೀರು ಸ್ಥಳ ಹಾಗೂ ಸ್ವತ್ತು ಸ್ವಾಧೀನತಾ ಮಹಜರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದ್ರಿ ಮಹಜರನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ತಕ್ಷೀರು ಸ್ಥಳದ ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-3 ರಿಂದ 5 ಎಂದು ಗುರುತಿಸಲಾಯಿತು. ಸ್ವಾ ಧೀನಪಡಿಕೊಂಡ ಸ್ವತ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಸ್ವತ್ತುಗಳನ್ನು ನೋಡಿ ಗುರುತಿಸಿದ್ದು 2 ಪೈಟಿಂಗ್ ಬಕೆಟ್ ಗಳನ್ನು ಮು ಮಾ-1 ಎಂದು, ಮರದ ತುಂಡನ್ನು ಮು ಮಾ-2 ಎಂದು, ನೈಲಾನ್ ಚೀಲವನ್ನು ಮು ಮಾ-3 ಎಂದು, ಮರದ ಹಿಡಿಕೆ ಇರುವ ಕಬ್ಬಿಣದ ಕತ್ತಿಯನ್ನು ಮು ಮ-4 ಎಂದು ಗುರುತಿಸಲಾಯಿತು. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲು</u> ಃ ಆರೋಪಿತರ ಪರ ಃ ಶ್ರೀ ಎ ಎಸ್ ಎಂ ವಕೀಲರು ಸಮಯವಕಾಶ ಕೋರಿದ್ದು ನಿರಾಕರಿಸಲಾಯಿತು.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.
ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ